**ಇಂದು ದಿನಾಂಕಃ 30-08-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದಃ-**

1ನೇ ಆರೋಪಿ ಬಿಜೆಪಿ ಪಕ್ಷದ ಕಾರ್ಯಕರ್ತ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕಾಂಗ್ರೇಸ ಪಕ್ಷದ ಕಾರ್ಯಕರ್ತ ಎಂದರೆ ಸರಿಯಲ್ಲ. ಈ ಪ್ರಕರಣವಾದ ನಂತರ ನಾನು ಆರೋಪಿತರ ವಿರುದ್ದ ಎರಡು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ಒಂದು ಪ್ರಕರಣದಲ್ಲಿ ಆರೋಪಿತರಿಗೆ ಬಿಡುಗಡೆಯಾಗಿದೆ ಎಂದರೆ ಸರಿಯಲ್ಲ. ಲಲಿತಾಬಾಯಿರವರು ನನ್ನ ವಿರುದ್ದ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. 1ನೇ ಆರೋಪಿ ಸಮಾಜ ಸೇವೆ ಕೆಲಸ ಮಾಡತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಂಡಾದ ಸೇವಾಲಾಲ

ದೇವಸ್ಥಾನ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಕೆಲಸವನ್ನು ನಾನು ಅಡೆತಡೆ ಮಾಡುತ್ತಾ ಬಂದಿರುತ್ತೇನೆ ಎಂದರೆ ಸಾಕ್ಷಿ 1ನೇ ಆರೋಪಿ ಯಾವುದೇ ಒಳ್ಳೆಯ ಕೆಲಸ ಮಾಡುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ತಾರಿಕು, ತಿಂಗಳು ಹಾಗೂ ವರ್ಷ ಅರ್ಥವಾಗುವುದಿಲ್ಲ. ದಿನಾಂಕ 13-04-2016 ರಂದು 1ನೇ ಆರೋಪಿ ಎಲ್ಲಿ ಇದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ತಾರೀಕು ಅರ್ಥವಾಗುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಾನು ಮತ್ತು ನನ್ನ ಹೆಂಡತಿ ಒಂದೇ ದೂರನ್ನು ನೀಡಿರುತ್ತೇವೆ. ಸಾಕ್ಷಿ ಮುಂದುವರೆದು ನಂತರ ಮತ್ತೆ ಆರೋಪಿತರು ಹೊಡೆದ ಕಾರಣ ಮತ್ತೆ ಬೇರೆ ದೂರನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಬೇರೆ ದೂರು ಎಷ್ಟು ದಿನಗಳಾದ ನಂತರ ನೀಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದೂರನ್ನು ನಾನು ಹೇಳಿದಂತೆ ಪೊಲೀಸರು ಬರೆದಿದ್ದಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದ ನಂತರ ಮೊದಲು ಆಸ್ಪತ್ರೆಗೆ ಹೋಗಿ ನಂತರ ಅಲ್ಲಿಂದ ಪೋಲಿಸ ಠಾಣೆಗೆ ಹೋಗಿರುತ್ತೇವೆ. ಸುಲೇಪೇಟ ಆಸ್ಪತ್ರೆಗೆ ಹೋದಾಗ ಎಷ್ಟು ಸಮಯವಾಗಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ಸಂಜೆ 4 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗೆ ಹೋಗಿದ 2 ದಿನಗಳ ನಂತರ ಪೋಲಿಸರು ಆಸ್ಪತ್ರೆಗೆ ಬಂದಿರುತ್ತಾರೆ. ಘಟನೆಯಾದ ದಿನದಂದೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಸರಕಾರಿ ಆಸ್ಪತ್ರೆ ಕಲಬುರಗಿಯಲ್ಲಿ 2 ದಿನಗಳ ನಂತರ ಪೋಲಿಸರು ಬಂದಿರುತ್ತಾರೆ. ದೂರನ್ನು ಸರಕಾರಿ ಆಸ್ಪತ್ರೆ ಕಲಬುರಗಿಯಲ್ಲಿ ಕೊಟ್ಟಿದ್ದೇನೆ. ಸಾಕ್ಷಿ ಮುಂದುವರೆದು ನಂತರ ಮತ್ತೆ ರಟಕಲ ಪೋಲಿಸ ಠಾಣೆಗೆ ಬಂದಿದ್ದೇನೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ದೂರು ಪಡೆದಾಗ ಬೆಳಗ್ಗೆ 10 ರಿಂದ 11 ಗಂಟೆಯಾಗಿತ್ತು. ಆಸ್ಪತ್ರೆಯಲ್ಲಿ ನಾನು ಹೇಳಿದಂತೆ ಪೋಲಿಸರು ಬರೆದುಕೊಂಡು ನನ್ನ ಸಹಿಯನ್ನು ಪಡೆದಿರುತ್ತಾರೆ.

ಯಾವುದೇ ಘಟನೆಯಾಗದೇ ಇದ್ದರು ಸಹ ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲು ಮಾಡಿದ ಕಾರಣ ಅವರಿಗೆ ಸತಾಯಿಸಲು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಲ್ಲೆ ಮಾಡಲು ಬಳಸಿದ ಖಾರವನ್ನು ಪೋಲಿಸರು ಜಪ್ತಿ ಮಾಡಿಲ್ಲ. ಆರೋಪಿತರಿಗೆ ಸತಾಯಿಸಲು ಸುಳ್ಳು ಕಥೆ ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಡಿಗೆಯಿಂದ ಹಲ್ಲೆ ಮಾಡಿರುವ ಬಗ್ಗೆ, ಜೀವ ಬೇದರಿಕೆ ಹಾಕಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಘಟನೆಯಾದಾಗ ಸ್ಥಳದಲ್ಲಿ 2-3 ಜನರು ಇದ್ದರು. ಸಾಮಾನ್ಯವಾಗಿ ಬಾವಿ ಹತ್ತಿರ 50-60 ಜನರು

ಇರುತ್ತಾರೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದಲ್ಲಿಯೂ ಸಹ ಇದೇ ರೀತಿಯಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**